ಕ್ಷಮಿಸುತ್ತೀಯಲ್ಲ ಮಂಜುಳಾ ಎಂಬ ಮಾತು ಕಣ್ಣಲ್ಲಿ ತೋಯತೊಡಗಿದಾಗ ಅವಳಿಗರಿವಾಯ್ತು– ಮಂಜುಳಾ ಯಾವ ಮಾಯದಲ್ಲೋ ಎದ್ದುಬಂದು ಅವಳ ಪಕ್ಕ ಕುಳಿತಿದ್ದಳು, ದೀಪ ಉರಿಯುತ್ತಿತ್ತು. ಮಂಜುಳಾ ಸುರಭಿಯನ್ನು ಕಣ್ಣು ಪಿಳುಕಿಸದೆ ನೋಡುತ್ತಿದ್ದಳು. ರಾತ್ರಿ ಹೋಟೆಲವ ರೂಮು ಕೊಡದಿದ್ದರೆ... ಜನರ ಗುಂಪು ನುಗ್ಗಿದಾಗ ಇವಳು ಡ್ರೆಸಿಂಗ್ ರೂಮಲ್ಲಿಲ್ಲವಾಗಿದ್ರೆ... ಒಂದು ವೇಳೆ ಜನರಗುಂಪೇ ಬರದಿದ್ರೆ... ಅವನು ಮತ್ಯಾರೊ ಆಗಿದ್ರೆ... ಅದೃಷ್ಟ ಇಷ್ಟೆಲ್ಲಾ ಬಾರಿ ಕೈಹಿಡಿಯುತ್ತಾ?! ತಾನು ಪ್ರತಿಕ್ರಿಯೆಯಿಲ್ಲದೇ ಕುಳಿತಿದ್ದು ಅರಿವಾಗಿ, '...ಸುರಭಿ, ಬಿಟ್ಟುಬಿಡು. ಈಗ ದಡ ಸೇರಿಯಾಯ್ತಲ್ಲ!' ಭುಜದಮೇಲೆ ಕೈಯಿಟ್ಟಳು. 'ಚಿತ್ರೀಕರಣದ ಬಗ್ಗೆ ಹೆಚ್ಚು ಗೊತ್ತಿಲ್ಲ, ಆ ನಿರ್ದೇಶಕ ಪ್ರಸಿದ್ಧರು, ಅಷ್ಟು ಗೊತ್ತು. ಅವರದೆಷ್ಟೋ ಸಿನಿಮಾ ನೋಡಿದೀನಿ. ಭವಿಷ್ಯದ ಬಗ್ಗೆ ಚಿಂತೆ ಬಿಡು. ಎಲ್ಲಾ ಶ್ರಮ ಹಾಕಿ ಕೆಲಸಮಾಡು. ಕಂಗ್ರಾಟ್ಸ್ ಕಣೇ ಹೀರೋಯಿನ್ ಸುರಭೀ... ನಂಗೆ ಹೊಟ್ಟೆಕಿಚ್ಚಾಗ್ತಿದೆ.' ಅವಳ ಕೈ ಕುಲುಕಿದಳು.

'ನಾನೊಂದು ಬ್ಯಾಂಕ್ ಅಕೌಂಟು ತೆರೀಬೇಕು, ಸಹಾಯ ಮಾಡತೀಯ?' ಕೇಳಿದಳು.

'ಆಗಲಮ್ಮಾ, ಲಕ್ಷ ಲಕ್ಷ ತುಂಬೋಕೆ ಬೇಕಾಗುತ್ತೆ' ಕಿಚಾಯಿಸಿದಳು.

★★★

ಚಿತ್ರೀಕರಣ ತೊಡಗಿತು. ಸಮಯಕ್ಕೆ ವಾಹನ ಬಂದು ಕರೆದೊಯ್ಯುತ್ತಿತ್ತು. ಬಿಳಿಗಿರಿರಂಗನಬೆಟ್ಟದ ಹಾಡಿಯಲ್ಲಿ, ಬಂಡೀಪುರ ಅರಣ್ಯದ ಸೆರಗಲ್ಲಿ ಚಿತ್ರೀಕರಣ ನಡೆಯಿತು. ಪ್ರತಿ ಸೀನಿನ ವಿವರ, ಸಂಭಾಷಣೆ ಎಲ್ಲವನ್ನೂ ಮತ್ತೆಮತ್ತೆ ನೋಡಿ ಪೂರ್ವತಯಾರಿ ಮಾಡಿಕೊಳ್ಳುವ ಜಯರಾಂಗೆ ಎಫೆಕ್ಟ್ ನೆನಸಿದಂತೆಯೇ ಬರಬೇಕು, ಒಂದಿಷ್ಟೂ ಹೊಂದಾಣಿಕೆ ಮಾಡಿಕೊಳ್ಳುತ್ತಿರಲಿಲ್ಲ. ಆದರೆ ಅಗಾಧ ತಾಳ್ಮೆಯಿತ್ತು. ಕ್ಯಾಮರಾದ ಕಣ್ಣಲ್ಲಿ ಇಬ್ಬರಿದ್ದರೆ ಹಿಂದೆ ಇಪ್ಪತ್ತುಜನರ ಪರಿಶ್ರಮವಿರುವ ಅರಿವಾಯಿತು ಸುರಭಿಗೆ. ಒಂದು ಸಂದರ್ಭದಲ್ಲಿ ಅವಳು ಹದಿನಾರು ಟೇಕ್‌ಗಳನ್ನು ತೆಗೆದುಕೊಂಡಳು. ಹೀರೋ ಐದಾರು ಚಿತ್ರಗಳಲ್ಲಿ ಮಾಡಿದವನೇ. ಆದರೆ ತಾರಾಪಟ್ಟಕ್ಕೇರಿದವನಲ್ಲ. ಜಯರಾಂ ಇದ್ದಲ್ಲಿ ಸಿಡಿಮಿಡಿ ತೋರಿಸಿಕೊಳ್ಳುವಂತಿರಲಿಲ್ಲ. ಸುರಭಿಗೇ ಬೇಸರವಾಗಿ ಮುಂದಿನ ಸೀನುಗಳ ವಿವರವನ್ನು ಮೊದಲೇ ಕೇಳಿಟ್ಟುಕೊಂಡು ಮನದಲ್ಲೇ ನಟಿಸುತ್ತ ಅಭ್ಯಾಸಕ್ಕೆ ತೊಡಗಿದಳು. ಜಯರಾಂ ಶ್ರದ್ಧೆ ಅವಳನ್ನು ಪ್ರಭಾವಿಸಿತ್ತು. ಕತೆಯಲ್ಲಿ ಕಳೆದುಕೊಳ್ಳುತ್ತಾ ಹೋದಳು. ಎರಡು ಸೀನುಗಳಲ್ಲಿ ಹಳ್ಳದ ದಂಡೆಯಲ್ಲಿ ಒಳವಸ್ತ್ರವಿಲ್ಲದೆ ಮೊಳಕಾಲಿಂದ ಭುಜದವರೆಗೆ ಸೀರೆಮಾತ್ರ ಸುತ್ತಿಕೊಂಡು ಅಭಿನಯಿಸುವುದಿತ್ತು. ಸ್ವಲ್ಪವೂ ಮುಜುಗರಪಡದೆ ಸಹಜವೆಂಬಂತೆ ನಡೆದು ಬಂದು ಭಲೆ ಅನ್ನಿಸಿಕೊಂಡಳು. ಎಲ್ಲರ ಸಹಕಾರವಿರುತ್ತಿತ್ತು ಆದರೆ, ಹೊತ್ತುಗೊತ್ತಿರುತ್ತಿರಲಿಲ್ಲ. ಬಯಸಿದಂತೆ ಚಿತ್ರೀಕರಣ ಬರದಿದ್ದರೆ ಅದೇ ಮುಂದುವರಿಯುತ್ತಿತ್ತು. ಆವತ್ತಿಂದು ಮುಗಿದು ಮಲಗಲು ಹೋಗುವಾಗ ಮನಸ್ಸು, ಶರೀರವೆರಡೂ ಹಿಂಡಿದ ಬಟ್ಟೆಯಂತಿರುತ್ತಿತ್ತು. ಆದರೆ ಅದು ಮನಸೋ ಇಚ್ಛೆ ಆಟವಾಡಿ ಗೆದ್ದ ನಂತರದ ದಣಿವು; ಜೀತದಾಳಿನ ಬೇಗೆಯ ದಣಿವಲ್ಲ. ಆದಿವಾಸಿ ಹುಡುಗಿಯಾಗಿದ್ದಕ್ಕೆ ಬಣ್ಣವನ್ನು ಕಂದು ಮಾಡುತ್ತಿದ್ದರು. ಕೂದಲಿಗೆ ಬಗೆಬಗೆ ವಿನ್ಯಾಸ, ಫ್ಯಾಷನ್ನಿನ ಉಡುಪು ಇರಲಿಲ್ಲ. ಅದಕ್ಕೆ ಸಣ್ಣ ಬೇಜಾರಿತ್ತು. ಅವಳ ಸಹಜ ಆರೋಗ್ಯವಂತ ಮೈಕಟ್ಟು ಆ ಪಾತ್ರದಲ್ಲೂ ಒಂದು ಗ್ಲಾಮರನ್ನು ತುಂಬಿದ್ದು ಜಯರಾಂ ಮತ್ತು ತಂಡದವರ ಲಕ್ಷ್ಯಕ್ಕೆ ಬಂದಿತ್ತು. ನಾಲ್ಕು ತಿಂಗಳಾಗುವಾಗ ಚಿತ್ರೀಕರಣ ಮುಕ್ಕಾಲುವಾಸಿ ಮುಗಿಯಿತು. ಪತ್ರಿಕೆಗಳಲ್ಲಿ, ಟೀವಿ ವಾಹಿನಿಗಳಲ್ಲಿ ಚಿತ್ರದ ಬಗ್ಗೆ ಸುದ್ದಿಸಾರಾಂಶ